# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿ.ಆ(ಘ.ತ್ಯಾ.ನಿ.)/ಪಿಆರ್/43/2015-16

ವಿಶೇಷ ಆಯುಕ್ತರು (ಘನತ್ಯಾಜ್ಯ/ಆರೋಗ್ಯ)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:18.01.2016.

**:: ಸುತ್ತೋಲೆ :: - 06**

ಮಾನ್ಯರೆ,

ವಿಷಯ: ಸಾರ್ವಜನಿಕರ ಹಿತಾಸಕ್ತಿಯ ಅನುಕೂಲಕ್ಕಾಗಿ ಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳ ಹುದ್ದೆ, ಹೆಸರು ಹಾಗೂ ಮೊಬೈಲ್ ಸಂಖ್ಯೆಗಳನ್ನು ಹಾಗೂ ಆಟೋ ಟಿಪ್ಪರ್‌ಗಳ ಮಾಹಿತಿಯನ್ನು ಜನ ಪ್ರತಿನಿಧಿಗಳಲ್ಲಿ, RWA, NGO's, Citizen forum, Public domain, ನಲ್ಲಿ ಪ್ರಚುರ ಪಡಿಸುವ ಕುರಿತು.

ಉಲ್ಲೇಖ: 1. ಆಯುಕ್ತರವರ ಸುತ್ತೋಲೆ-2 ಸಂಖ್ಯೆ:ಆ/ಪಿಎಸ್‌ಆರ್/ಪಿ-216/2015-16 ದಿನಾಂಕ:11.12.2015.
2. ಆಯುಕ್ತರವರ ಸುತ್ತೋಲೆ-5 ಸಂಖ್ಯೆ:ಆ.ಆ.ಶಾ/ಪಿಎಸ್‌ಆರ್/42/2015-16 ದಿನಾಂಕ:08.01.2016.

*****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ 8 ವಲಯಗಳಾಗಿ ವಿಂಗಡಿಸಲಾಗಿದೆ. 8 ವಲಯಗಳಾದ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ದಾಸರಹಳ್ಳಿ ಮಹದೇವಪುರ, ರಾಜರಾಜೇಶ್ವರಿನಗರ ಮತ್ತು ಯಲಹಂಕ ಗಳಲ್ಲಿ ಅಪರ/ಜಂಟಿ ಆಯುಕ್ತರು, ಮುಖ್ಯ ಅಭಿಯಂತರರ ಮೇಲುಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿರುತ್ತವೆ.

ಮೂಲಭೂತ ಸೌಕರ್ಯ, ನೈರ್ಮಲ್ಯ, ಸ್ವಚ್ಛತೆ, ಆರೋಗ್ಯ ಕಾಪಾಡುವುದು ಮುಂತಾದ ಗುರುತರ ಜವಾಬ್ದಾರಿಯನ್ನು ಪಾಲಿಕೆಯು ನಿರ್ವಹಿಸುತ್ತಿರುತ್ತದೆ. ಈಗಾಗಲೇ ಸಾರ್ವಜನಿಕರ ಕುಂದು ಕೊರತೆಗಳನ್ನು ಬಗೆಹರಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳ ಬಗ್ಗೆ ದೂರನ್ನು ತಿಳಿಸಲು ನಿಯಂತ್ರಣ ಕೊಠಡಿಗಳನ್ನು ಎಲ್ಲಾ ವಲಯಗಳಲ್ಲೂ ಹಾಗೂ ಕೇಂದ್ರ ಕಛೇರಿಯಲ್ಲೂ ತೆರೆಯಲಾಗಿರುತ್ತದೆ. ಸಾರ್ವಜನಿಕರು ತಮ್ಮ ದೂರುಗಳನ್ನು ಆನ್-ಲೈನ್ ಮುಖಾಂತರವು ತಿಳಿಸಬಹುದಾಗಿರುತ್ತದೆ. ಅದ್ಯಾಗ್ಯೂ ಸಾರ್ವಜನಿಕರ ಬಹುತೇಕ ದೂರುಗಳು ಕೇಂದ್ರ ಕಛೇರಿಯಲ್ಲಿ/ಐ.ಪಿ.ಪಿ. ಕೇಂದ್ರದಲ್ಲಿ ದಾಖಲಾಗುತ್ತಿರುತ್ತವೆ.

ಸಾರ್ವಜನಿಕರ ಕುಂದು ಕೊರತೆಯ ದೂರುಗಳು ವಾರ್ಡ್ ಮಟ್ಟದಲ್ಲಿ ಹಾಗೂ ಉಪವಿಭಾಗ ಮಟ್ಟದ ಅಧಿಕಾರಿಗಳಿಗೆ ನೇರವಾಗಿ ತಲುಪಿದ್ದಲ್ಲಿ ದೂರುಗಳನ್ನು ಕೇಂದ್ರ ಕಛೇರಿಯಲ್ಲಿ ಸ್ವೀಕರಿಸಿ ಮತ್ತೆ ವಾರ್ಡ್ ಮಟ್ಟದ ಅಧಿಕಾರಿಗಳಿಗೆ ತಿಳಿಸುವ ಸಮಯವು ಉಳಿದು, ಕೆಲವು ಗೊಂದಲಗಳು ಕಡಿಮೆಯಾಗುತ್ತದೆ. ಆದುದ್ದರಿಂದ ಎಲ್ಲಾ ವಲಯ ವ್ಯಾಪ್ತಿಯಲ್ಲಿ ಅಪರ/ಜಂಟಿ ಆಯುಕ್ತರು ಹಾಗೂ ಮುಖ್ಯ

ಅಭಿಯಂತರರು ಈ ಆದೇಶದೊಂದಿಗೆ ನೀಡಿರುವ ನಮೂನೆಗಳಲ್ಲಿ ವಾರ್ಡ್ ಮಟ್ಟದ ಅಧಿಕಾರಿಗಳಾದ ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು, ಕಿರಿಯ/ಸಹಾಯಕ ಅಭಿಯಂತರರ ಹೆಸರು ಹಾಗೂ ಮೊಬೈಲ್ ಸಂಖ್ಯೆ ಮತ್ತು ಉಪವಿಭಾಗದ ಮೇಲುಸ್ತುವಾರಿ ಅಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು/ಆರೋಗ್ಯ ವೈದ್ಯಾಧಿಕಾರಿಗಳು ರವರ ಹೆಸರು ಹಾಗೂ ಮೊಬೈಲ್ ಸಂಖ್ಯೆಯನ್ನು ಮತ್ತು ವಾರ್ಡ್ ವ್ಯಾಪ್ತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಟೋ ಟಿಪ್ಪರ್‌ಗಳ ಹಂಚಿಕೆ, ಚಾಲಕರ ಹಾಗೂ ಮೇಲ್ವಿಚಾರಕರ ಮಾಹಿತಿಯನ್ನು ಈ ಸುತ್ತೋಲೆಯೊಂದಿಗೆ ನೀಡಿರುವ 2 ಪ್ರತ್ಯೇಕ ನಮೂನೆಗಳಲ್ಲಿ, ಜನ ಪ್ರತಿನಿಧಿಗಳಲ್ಲಿ, RWA, NGO's, Citizen forum, ಹಾಗೂ DWC, ಮುಂತಾದ Public domain, ನಲ್ಲಿ ಪ್ರಚುರ ಪಡಿಸಲು ಸೂಚಿಸಿದೆ.

19.1.16.

ವಿಶೇಷ ಆಯುಕ್ತರು (ಘ.ತ್ಯಾ.ನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು,**

- ಪೂಜ್ಯ ಮಹಾಪೌರರ ಗಮನಕ್ಕೆ ತರಲು ಮಹಾಪೌರರ ಆಪ್ತ ಕಾರ್ಯಲಯಕ್ಕೆ ಕಳುಹಿಸಲಾಗಿದೆ.
- ಉಪಮಹಾಪೌರರ ಗಮನಕ್ಕೆ ತರಲು ಮಹಾಪೌರರ ಆಪ್ತ ಕಾರ್ಯಲಯಕ್ಕೆ ಕಳುಹಿಸಲಾಗಿದೆ.
- ಮಾನ್ಯ ಆಯುಕ್ತರವರ ಅವಗಾಹನೆಗೆ ಮಂಡಿಸಿದೆ.
- ಕಛೇರಿ ಪ್ರತಿ.

**ರವರಿಗೆ,**

1. ಎಲ್ಲಾ ವಲಯದ ಅಪರ / ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಮುಖ್ಯ ಆರೋಗ್ಯಾಧಿಕಾರಿಗಳು / ವಲಯದ ಆರೋಗ್ಯಾಧಿಕಾರಿ / ಎಲ್ಲಾ ಉಪ ಆರೋಗ್ಯಾಧಿಕಾರಿಗಳು / ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳವರಿಗೆ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ವಲಯಗಳ ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ.

Annexure - 1

# Bruhath Bengaluru Mahanagara Palike

**Zone Name:**

## Ward level Officers

| Sl No | Ward Name & Number | AE / JE | | SHI / JHI | | Supervising Officers | | | |
|---|---|---|---|---|---|---|---|---|---|
| | | | | | | AEE | | MOH | |
| | | Name | Mobile No. | Name | Mobile No. | Name | Mobile No. | Name | Mobile No. |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

Annexure - 2

## Bruhath Bengaluru Mahanagara Palike

**Zone Name:**

**Details of Auto Tippers / Drivers / Supervisers**

**Ward Name:** **Ward No.**

| Sl No | Allocated area for Auto tipper | Registration No. | Driver's Name | Driver's Mobile Nos | Superviser's Name | Superviser's Mobile Nos |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |